(ಶ್ರೀ ಎಚ್. ಎಂ. ಚನ್ನಬಸಪ್ಪ.)

ದನೆ ಕಾಗದ ಪತ್ರಗಳ ವ್ಯವಹಾರ ನಡೆಸಲು ಸ್ವಲ್ಪ ಕಾಲವಿಳಂಬವಾಯಿತು. ಈಗ ಅದನ್ನೆಲ್ಲಾ ಸರಿಪಡಿಸಲಾಗಿದೆ. ಮುಂದಕ್ಕೆ ಯಾವ ಅಡಚಣೆಗಳೂ ಇಲ್ಲದಂತೆ ಹಣವನ್ನು ಬಳಸಬಹುದು.

ಶ್ರೀ ಸಿ. ಟಿ. ಹನುಮಂತಯ್ಯ.—ಚಿಕ್ಕನಾಯಕನ ಹಳ್ಳಿ, ತಿಪಟೂರು ಮತ್ತು ತುರುವೇಕೆರೆ, ಈ ಪ್ರದೇಶಗಳಬಗ್ಗೆ ತಿಪಟೂರಿನಲ್ಲೊಂದು ತೆಂಗಿನ ನಾರಿನ ಮತ್ತು ಚಿಪ್ಪಿನ ಕೈಗಾರಿಕಾ ಕಾರ್ಖಾನೆಯನ್ನು ತೆರೆಯತಕ್ಕ ಬಗ್ಗೆ ತಾವೇನು ಕಾರ್ಯಕ್ರಮ ಕೈಗೊಂಡಿದ್ದೀರಿ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಆ ಪ್ರಶ್ನೆ ಇದಕ್ಕೆ ಸಂಬಂಧಪಡುವುದಿಲ್ಲ. ಆದಾಗ್ಯೂ ಆ ವಿಚಾರದಲ್ಲಿ ಇಲ್ಲಿಯವರೆಗೆ ಯಾರಿಂದಲೂ ಮನವಿಗಳು ಬಂದಿಲ್ಲ. ಬಂದಾಗ ನೋಡೋಣ.

ಶ್ರೀ ಸಿ. ಟಿ. ಹನುಮಂತಯ್ಯ.—ಪಾವಗಡ ತಾಲ್ಲೂಕಿನಲ್ಲಿ ಒಂದು ಚರ್ಮ ಹದಮಾಡತಕ್ಕ ಕಾರ್ಖಾನೆಯನ್ನೇಕೆ ತೆರೆದಿಲ್ಲ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ನೋಟೀಸ್.

ಶ್ರೀ ಆರ್. ಮುನಿಸ್ವಾಮಯ್ಯ.—ಕೇಂದ್ರ ಸರ್ಕಾರದವರು ಈ ಹಣವನ್ನು ಬಳಸತಕ್ಕ ವಿಧಾನಕ್ಕೂ ಮತ್ತು ನಮ್ಮ ಸರ್ಕಾರ ಈ ಹಣವನ್ನು ಬಳಸತಕ್ಕ ವಿಧಾನಕ್ಕೂ ಬಹಳ ವ್ಯತ್ಯಾಸವಿತ್ತೆಂದು ಹೇಳಿದಿರಿ. ಆ ವಿಚಾರವನ್ನು ಅಷ್ಟು ದಿನಗಳವರೆಗೂ ಅರ್ಥಮಾಡಿಕೊಳ್ಳುವುದಕ್ಕೆ ಸಾಧ್ಯವಾಗಿರಲಿಲ್ಲವೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಆ ಹಣವನ್ನು ಡ್ರಾ ಮಾಡುವ ವಿಚಾರದಲ್ಲಿ ಸ್ವಲ್ಪ ವ್ಯತ್ಯಾಸವಿತ್ತು. ಆದರೆ ಈಗ ಅದನ್ನೆಲ್ಲಾ ಸರಿಪಡಿಸಲಾಗಿದೆ. ಇನ್ನು ಮುಂದಕ್ಕೆ ಅಂಥ ಯಾವ ತೊಂದರೆಗಳೂ ಇರುವುದಿಲ್ಲ.

Manganese Ore in Chiknaikanahalli Taluk (Licences granted)

Q.—644. Sri C. H. LINGADEVARU (Chiknaikanahalli).—

Will the Government be pleased to state :—

(*b*)—

Name	
Sriyuths—	
1. P. K. Sarangapani Mudaliar	...
2. B. K. R. N. Singh	...
3. Narayan D. Ubhayaker	...
4. M. Ramadas	...
5. G. Aneppa	...
6. M/s. T. V. Channanjasettappa & Bros.	
7. B. Hutche Gowda	

(*a*) the names of persons who have been granted licences to excavate manganese ore in Chiknaikanahalli Taluk ;

(*b*) the quantity of ore excavated by each during the years 1954 and 1955; and the royalty collected on it ;

(*c*) the extent of the area under District and State Forests where mining is done ;

(*d*) whether the amount due in respect of this under the Forest Manual has been received ;

(*e*) the department which has to collect this amount if mining is done in District Forest area ;

(*f*) if any amount has been collected, what it is ?

A.—H. M. CHANNABASAPPA (Minister for Industries).—

(*a*) The following persons have been granted Prospecting Licences and Mining Leases to excavate manganese ore in Chiknaikanahalli Taluk.

1. Sri P. K. Sarangapani Mudaliar.
2. ,, B. K. R. N. Singh.
3. ,, Narayan D. Ubhayaker.
4. ,, M. Ramadas.
5. ,, G. Aneppa.
6. ,, B. Hutche Gowda.
7. M/s. T. V. Channanjasettappa & Bros.

(*b*)—

	Ore excavated during		*Royalty collected*	
	1954	*1955*	*1954*	*1955*
	(*in tons*)	(*in tons*)	Rs.	Rs.
1.	7,165-5	9,072-15	11,845	15,005
2.	3,281-0	2,189-10	4,298	2,625
3.	1,000.0	1,702-15	548	1,663
4.	...	3,586-5	...	11,327
5.	184-0	560-0	100	1,392
6.	665-0	1,875-9	260	1,723
7.	(Holds only a prospecting licence)			

(*c*) The extent of the area under Reserved State Forests where mining is done is detailed below in respect of each grantee. As regards the extent of area that comes within District Forests, information is not readily available:

		Acres.
1	Sri P. K. Sarangapani Mudaliar.	950
2	M/s. T. V. Channanjasettappa.	310
3	Sri Narayan D. Ubhayaker.	650
4	,, M. Ramadas ...	50
5	,, B.K.R.N. Singh ..	10

(*d*) Yes.

(*e*) Revenue Department.

(*f*) No amount has been collected.

ಶ್ರೀ ಸಿ. ಎಚ್. ಲಂಗದೇವರು.—ತಾವು ಈ ರಾಯಲ್ಟಿಯನ್ನು ಯಾವ ರೇಟಿನ ಪ್ರಕಾರ ವಸೂಲ್ಮಾಡುತ್ತಿದ್ದೀರಿ ?

*ಶ್ರೀ ಎಚ್. ಎಂ. ಚನ್ನಬಸಪ್ಪ.—ಅದಕ್ಕೆಲ್ಲಾ ರೆವಿನ್ಯೂ ಮ್ಯಾನ್ಯುಯಲ್‌ನಲ್ಲಿ ರೂಲ್‌ಗಳನ್ನು ವಿಧಾಯಕ ಮಾಡಿದೆ. 5 per cent of the sale value.

ಶ್ರೀ ಸಿ. ಎಚ್. ಲಂಗದೇವರು.—ತಾವು ಈ ರಾಯಲ್ಟಿಯನ್ನು ಓರುಗಳನ್ನು ಎಕ್ಸ್‌ಕವೇಟ್ ಮಾಡುವುದರ ಮೇಲೆ ಛಾರ್ಜು ಮಾಡುತ್ತೀರೋ ಅಥವಾ ಹೊರಗಡೆಗೆ ರಫ್ತ್ ಮಾಡುವ ಮಾಲಿನ ಮೇಲೆ ಛಾರ್ಜು ಮಾಡುತ್ತೀರೋ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಗಣಿಯಿಂದ ಹೊರಗಡೆ ಹೋಗತಕ್ಕ ಮಾಲಿನ ಮೇಲೆ ಆ ಛಾರ್ಜನ್ನು ವಸೂಲ್ಮಾಡುತ್ತಿದ್ದೇವೆ.

ಶ್ರೀ ಸಿ. ಎಚ್. ಲಂಗದೇವರು.—ಈ ಸ್ಟೇಟ್ ಫಾರೆಸ್ಟ್‌ನಲ್ಲಿ ಈ ಗಣಿಗಳನ್ನು ಅವರು ತೆಗೆಯುತ್ತಿರುವುದರಿಂದ ಫಾರೆಸ್ಟ್ ಮ್ಯಾನ್ಯುಯಲ್ ಪ್ರಕಾರ ಕಳೆದ ಎರಡು ವರ್ಷಗಳಿಂದ ಎಷ್ಟು ಮೊಬಲಗು ವಸೂಲಾಗಿದೆ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಒಬ್ಬರಿಂದ 3,633 ರೂಪಾಯಿಗಳನ್ನೂ, ಇನ್ನೊಬ್ಬರಿಂದ 100 ರೂಪಾಯಿಗಳನ್ನೂ ಮತ್ತೊಬ್ಬರಿಂದ 325 ರೂಪಾಯಿಗಳನ್ನೂ, ಇನ್ನೊಬ್ಬರಿಂದ 300 ರೂಪಾಯಿಗಳನ್ನೂ ಹೀಗೆ ವಸೂಲ್ಮಾಡಿದ್ದೇವೆ.

ಶ್ರೀ ಸಿ. ಎಚ್. ಲಂಗದೇವರು.—ಡಿಸ್ಟ್ರಿಕ್ಟ್ ಫಾರೆಸ್ಟ್ ಏರಿಯಾ ಬಗ್ಗೆ ಎಷ್ಟು ವಸೂಲ್ಮಾಡಿದ್ದೀರಿ ?

Sri H. M. CHANNABASAPPA.—It is stated in the answer that no amount has been collected so far.

ಶ್ರೀ ಸಿ. ಎಚ್. ಲಂಗದೇವರು.—ಇದಕ್ಕೆ ಕಾರಣವೇನು ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಆ ಪ್ರದೇಶ ಡಿಸ್ಟ್ರಿಕ್ಟ್ ಫಾರೆಸ್ಟ್ ಏರಿಯೂ ಆಗಿದೆಯೋ ಅಥವಾ ಇಲ್ಲವೋ ಅದನ್ನು ನಾನು ಹೇಗೆ ಹೇಳಲಿ ?

ಶ್ರೀ ಸಿ. ಎಚ್. ಲಂಗದೇವರು.—ಹಾಗಾದರೆ ಅದನ್ನು ಪರಿಶೀಲನೆ ಮಾಡುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಆ ಪ್ರದೇಶ ಡಿಸ್ಟ್ರಿಕ್ಟ್ ಫಾರೆಸ್ಟ್ ಏರಿಯಾ ಅಲ್ಲದೆ ಇರಬಹುದು. ಆ ಬಗ್ಗೆ ನನಗಿನ್ನೂ ವರ್ತಮಾನ ಬಂದಿಲ್ಲ. ಆದಾಗ್ಯೂ ವಿಚಾರ ಮಾಡಿ ನೋಡುತ್ತೇನೆ.

ಶ್ರೀ ಸಿ. ಎಚ್. ಲಂಗದೇವರು.—ಅಲ್ಲಿ ಈ ಮೈನಿಂಗ್ ಕೆಲಸ ಎಷ್ಟು ವರ್ಷಗಳಿಂದ ನಡೆಯುತ್ತಿದೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ನಾವು ಯಾವತ್ತು ಅವರಿಗೆ ಲೈನ್ಸ್ ಕೊಟ್ಟಿದ್ದೇವೋ ಆ ಹೊತ್ತಿನಿಂದಲೂ ಅಲ್ಲಿ ಆ ಕೆಲಸ ಜರುಗುತ್ತಿದೆ.

ಶ್ರೀ ಸಿ. ಎಚ್. ಲಂಗದೇವರು.—ಈ ಮೊಬಲಗನ್ನು ತಾವು ಎಷ್ಟು ವರ್ಷಗಳಿಂದ ವಸೂಲ್ಮಾಡುತ್ತಿದ್ದೀರಿ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ತಾವು ಎಷ್ಟು ವರ್ಷಗಳಿಗೆ ಅಂಕೀ ಅಂಶಗಳನ್ನೊದಗಿಸಬೇಕೆಂದು ಕೇಳಿದ್ದಿರೋ ಅಷ್ಟು ವರ್ಷಗಳಿಗೆ ಮಾತ್ರ ಈಗ ಇಲ್ಲಿ ಉತ್ತರ ಕೊಟ್ಟಿದ್ದೇವೆ.

Police Constables (Qualifications for Recruitment).

Q.—78. Sri K. Kotra BASAVANA GOUD (Kudligi).—

Will the Government be pleased to state:—

the conditions that govern the selection of Police Constables regarding their education and physical fitness in the State and the conditions regarding the same prevailing in the neighbouring States of Madras and Bombay ?

A.—Sri H. SIDDAVEERAPPA (Minister for Home).—

	Mysore State	*Madras State*	*Bombay State*
(*a*)	Education—Middle School Examination.	III Form or VIII Standard.	VI Standard in Primary School or II Standard in English Secondary School.
(*b*)	Physical Fitness.—		
	City and Armed Reserve.	Height 5′ 6″	*City and Armed Reserve*
	Height 5′ 7″	Chest 34″	Height 5′ 6″
	Chest 32″	(on full inspiration)	Chest 32″
	District and Railways		*District*
	Height 5′ 5″	...	... Height 5′ 4″
	Chest 32″	...	... Chest 31″